ಕುಂದಾಪುರ ತಾಲ್ಲೂಕು ಗೇರು ಅಭಿವೃದ್ಧಿ ನಿಗಮದ ಪೆನ್ನಿ ಕಾರ್ಖಾನೆ

1752 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಗುಜ್ಜಾಡಿಯಲ್ಲಿ ಗೇರು ಅಭಿವೃದ್ಧಿ ನಿಗಮದ ಪೆನ್ನಿ ತಯಾರಿಸುವ ಕಾರ್ಖಾನೆ ಎಂದು ಮಂಜೂರಾಯಿತು. ಮತ್ತು ಎಂದು ಉತ್ಪಾದನೆ ಪ್ರಾರಂಭಿಸಲಾಯಿತು ಮತ್ತು ಉತ್ಪಾದನಾ ಸಮಯದಲ್ಲಿ ತಗಲಿದ ಒಟ್ಟು ವೆಚ್ಚ ಎಷ್ಟು?

ಆ) ಉತ್ಪಾದನಾ ಪ್ರಾರಂಭಿಸಿದ ತಾರೀಖಿನಿಂದ ಉತ್ಪಾದನೆ ಮಾಡಿದ ಪೆನ್ನಿ ಎಷ್ಟು? (ವರ್ಷಾವಾರು ವಿವರ ಮತ್ತು ನಷ್ಟದ ವಿವರ)

ಇ) ಗೇರು ಅಭಿವೃದ್ಧಿ ನಿಗಮದ ಈ ಕಾರ್ಖಾನೆಯಲ್ಲಿ ಮಂಜೂರಾದ ಸಿಬ್ಬಂದಿಗಳೆಷ್ಟು, ಈಗ ಇರುವ ಸಿಬ್ಬಂದಿಗಳೆಷ್ಟು? ಅವರಿಗಾಗಿ ಕಟ್ಟಿಸಲಾದ ವಸತಿ ವ್ಯವಸ್ಥೆಗಳಾವುವು? ಅದನ್ನು ಈಗ ಯಾರು ಉಪಯೋಗಿಸುತ್ತಾರೆ?

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) :

ಅ) ದಿನಾಂಕ 8-1-1987ರಲ್ಲಿ ಮಂಜೂರಾಗಿದೆ. ದಿನಾಂಕ 1-3-1989ರಲ್ಲಿ ಉತ್ಪಾದನೆ ಪ್ರಾರಂಭಿಸಲಾಯಿತು. ಉತ್ಪಾದನಾ ಸಮಯದಲ್ಲಿ ತಗಲಿದ ಒಟ್ಟು ವೆಚ್ಚ ರೂ. 37.25 ಲಕ್ಷಗಳು

ಆ) 1989-90 ಮತ್ತು 1990-91ರಲ್ಲಿ ಒಟ್ಟು 27,573.00 ಲೀಟರ್ ಪೆನ್ನಿಯನ್ನು ಉತ್ಪಾದಿಸಲಾಗಿದೆ. ಇದರ ಉತ್ಪಾದನಾ ವೆಚ್ಚ ರೂ. 11.19 ಲಕ್ಷಗಳು.

ವರ್ಷಾವಾರು ಮಾರಾಟ ಮಾಡಿರುವ ವಿವರ ಈ ಕೆಳಗಿನಂತಿವೆ

1)	1991-92	8962 ಲೀಟರ್
2)	1992-93	ಇಲ್ಲ
3)	1993-94	2871 ಲೀಟರ್
4)	1994-95	126 ಲೀಟರ್
5)	1995-96	ಇಲ್ಲ
6)	1997-98	99 ಲೀಟರ್
	ಒಟ್ಟು	**12058 ಲೀಟರ್ಸ್**

ಇದರಿಂದ ನಿಗಮಕ್ಕೆ ಒಟ್ಟು ರೂಪಾಯಿ 3,33,496-00 ಬಂದಿದೆ. 15514.92 ಲೀಟರ್ ಪೆನ್ನಿ ಸ್ಟಾಕ್ ಇದ್ದು ಇದರ ಮಾರಾಟದಿಂದ ರೂ. 12,73,050-00 ಗಳನ್ನು ನಿರೀಕ್ಷಿಸಲಾಗಿದೆ.

ಇ) ಒಟ್ಟು ಮಂಜೂರಾದ ಸಿಬ್ಬಂದಿಗಳ ಸಂಖ್ಯೆ : 4 ಈಗ ಇರುವ ಸಿಬ್ಬಂದಿಗಳ ಸಂಖ್ಯೆ : 3 ಅವರಿಗೆ ಯಾವುದೇ ಪ್ರತ್ಯೇಕ ವಸತಿ ವ್ಯವಸ್ಥೆ ಕಲ್ಪಿಸಲಾಗಿಲ್ಲ.

ಕುಂದಾಪುರ ವಿಭಾಗದಲ್ಲಿ ಅರಣ್ಯ ಕಳ್ಳಸಾಗಾಟನೆ

1753 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ವರ್ಷಗಳಲ್ಲಿ ಕುಂದಾಪುರ ವಿಭಾಗದಲ್ಲಿ ಅರಣ್ಯ ಕಳ್ಳ ಸಾಗಾಟದಲ್ಲಿ ಬಳಸಲಾದ ವಾಹನಗಳಾವುವು? (ವಾಹನಗಳ ನಂಬರ್, ಬಳಸಲಾದ ತಾರೀಖು ಗ್ರಾಮ ಹಾಗೂ ವಲಯ ತಿಳಿಸುವುದು)

ಆ) ಕಳೆದ 5 ವರ್ಷಗಳಲ್ಲಿ ಬಿಡುಗಡೆ ಮಾಡಿದ ವಾಹನಗಳಾವುವು? (ವಾಹನಗಳು ಯಾರಿಗೆ ಸಂಬಂಧಿಸಿದ್ದು ಹಾಗೂ ಬಿಡುಗಡೆ ಮಾಡಿದ ತಾರೀಖು ತಿಳಿಸುವುದು)

ಇ) ಪತ್ತೆ ಹಚ್ಚಲಾದ ಅರಣ್ಯ ಸ್ವತ್ತುಗಳು ಮತ್ತು ಉತ್ಪನ್ನಗಳಾವುವು?

ಈ) ಎಷ್ಟು ದಂಡವನ್ನು ವಿಧಿಸಲಾಗಿದೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.

ಆ) ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ

ಇ) ಈ ಕೆಳಕಂಡ ದಿಮ್ಮಿ, ನಾಟಾ, ಹಲಗೆ, ಬೆತ್ತದ ಮಂಕರಿ ಹಾಗೂ ಮಸಿ ಚೀಲಗಳು ಒಳಗೊಂಡಿರುತ್ತದೆ. ಮಾವು, ಶ್ರೀಗಂಧ, ನಂದಿ, ಹುಣಗಲು, ಜಂಬೆ ಕಟ್ಟಿಗೆ, ಹಲಸು, ಕಿರಲ್‌ಬೋಗಿ, ಕಾಚ್ಚು, ಸಾಗುವಾನಿ, ಬೀಟೆ ಕರಿಮರ, ಹೆಬ್ಬಲಸು, ಗಾಳಿಮರ ದೇವದಾರು, ಹಾಲ್ಮಡ್ಡಿ, ದೂಪ, ಮತ್ತಿ, ನೇರಳೆ

ಈ) 1993-94 ರಿಂದ 1997-98ರ 5 ವರ್ಷಗಳಲ್ಲಿ ರೂ. 7,73,949-00 ಗಳನ್ನು ದಂಡದ ರೂಪದಲ್ಲಿ ವಸೂಲು ಮಾಡಲಾಗಿದೆ.